**ಎಸ್.ಸಿ.ಸಂಖ್ಯೆ:10047/2025**

**ಪ್ರಾ.ಸಾ.ಸಂಖ್ಯೆ: 13**

**ಚಾ.ಸಾ.ಸಂಖ್ಯೆ: 9**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿ: ಮುಧೋಳ</u>**

**ಎಸ್.ಸಿ.ಸಂಖ್ಯೆ: 10047/2025**

| | |
|---|---|
| ಹೆಸರು: | ಮಂಜುನಾಥ ಹಿರಲಕ್ಕಿ |
| ತಂದೆಯ ಹೆಸರು: | ಸದಾಶಿವ |
| ವಯಸ್ಸು: | **40** ವರ್ಷ |
| ಉದ್ಯೋಗ: | ವಕೀಲ ವೃತ್ತಿ |
| ವಾಸ: | ಮುಧೋಳ. |

**ಸಾಕ್ಷಿಯನ್ನು ದಿ: 12.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:-</u>**

ನನಗೆ ಚಾಸಾ-**1** ಶೇಖರ ಮಾಂಗ ಇವರ ಪರಿಚಯವಿದೆ. ಈಗ ನೋಡುತ್ತಿರುವ ನಿಪಿ-**11** ನ್ನು ನಾನೇ ಬರೆದಿದ್ದೇನೆ. ಅದಕ್ಕೆ ನನ್ನ ಸಹಿ ಇದೆ. **(**ನಿಪಿ-**11** ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-**11(**ಬಿ**)** ಅಂತ ಗುರುತಿಸಲಾಯಿತು**).** ದಿ**: 27.02.2021** ರಂದು ನಾನು ಮುಧೋಳ ಪೊಲೀಸ್ ಠಾಣೆಯಲ್ಲಿ ಅದನ್ನು ಬರೆದಿದ್ದೇನೆ. ಅದನ್ನು ಬರೆಯಲು ಚಾಸಾ-**1** ಶೇಖರ ಮಾಹಿತಿ ನೀಡಿದ್ದಾರೆ. ಚಾಸಾ-**1** ರವರು ಹೇಳಿದಂತೆ ದೂರು ಬರೆದ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟಿಸವಾಲು: ಆರೋಪಿ ಪರ ವಕೀಲರಿಂದ:</u>**

**(ವಕೀಲರ ವಿನಂತಿ ಮೇರೆಗೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು. )**

**(ಸಾಕ್ಷಿದಾರರನ್ನು ಪುನ: ಮಧ್ಯಾಹ್ನದ ಅವಧಿಯಲ್ಲಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)**

**<u>ಪಾಟಿಸವಾಲು: ಆರೋಪಿ ಪರ ವಕೀಲರಿಂದ:</u>**

ನಾನು ಹಾಗೂ ಚಾಸಾ-**1** ಆತ್ಮೀಯ ಸ್ನೇಹಿತರು ಎಂದರೆ ಸರಿಯಲ್ಲ. ನಾನು **2013-14** ನೇ ಸಾಲಿನಿಂದ ನ್ಯಾಯವಾದಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಬಿ.ಜೆ.ಪಿ. ಪಕ್ಷದ ಸಕ್ರೀಯ ಕಾರ್ಯಕರ್ತ

**ಎಸ್.ಸಿ.ಸಂಖ್ಯೆಃ 10047**
**ಪ್ರಾ.ಸಾ.ಸಂಖ್ಯೆಃ13**
**ಚಾ.ಸಾ.ಸಂಖ್ಯೆಃ9**

ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ದೂರು ಬರೆಯಲು ಹೋದಾಗ ರಾತ್ರಿ **9** ಗಂಟೆಯಾಗಿತ್ತು. ಚಾಸಾ-**1** ನನ್ನನ್ನು ದೂರು ಬರೆಯಲು ಬರುವಂತೆ ಕೇಳಿಕೊಂಡ. ನಾನು ಆಗ ಮನೆಯಲ್ಲಿದ್ದೆ. ಚಾಸಾ-**1** ರವರು ನನಗೆ ಫೋನ್ ಮಾಡಿ ದೂರು ಬರೆಯಲು ಬರುವಂತೆ ಕೇಳಿಕೊಂಡರು. ದೂರನ್ನು ಬರೆಯಲು **10-15** ನಿಮಿಷ ತೆಗೆದುಕೊಂಡಿರುತ್ತೇನೆ. ನನಗೆ ದೂರು ಬರೆಯುವುದನ್ನು ಮುಗಿಸಿದ ನಿರ್ದಿಷ್ಟ ಸಮಯ ಗೊತ್ತಿಲ್ಲ.

**2.** ಪೊಲೀಸರು ನನ್ನ ಹೇಳಿಕೆಯನ್ನು ದೂರು ನೀಡಲು ಹೋದಾಗಲೇ ತೆಗೆದುಕೊಂಡಿದ್ದಾರೆ. ದೂರನ್ನು ನೀಡಲು ಅವರ ಮನೆಯಿಂದ ಚಾಸಾ-**1** ಮಾತ್ರ ಬಂದಿದ್ದ. ನಾನು ಹಾಗೂ ಚಾಸಾ-**1** ಸ್ನೇಹಿತರು ಇರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ದೂರನ್ನು ಬರೆದಿದ್ದೇನೆ ಎಂದರೆ ಸರಿಯಲ್ಲ. ಚಾಸಾ-**1** ರವರು **2**ನೇ ಆರೋಪಿಗೆ ಚಾಕುವಿನಿಂದ ಹಲ್ಲೆ ಮಾಡಿದ್ದರಿಂದ **2**ನೇ ಆರೋಪಿತನು ಕುಬುಸದ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ಆರೋಪಿ ಕಾಳಪ್ಪ ಚಾಸಾ-**1** ಇವರ ವಿರುದ್ದ ದೂರು ಸಲ್ಲಿಸಬಹುದು ಅಂತ ತಿಳಿದು, ಅದರಲ್ಲಿ ಉಳಿದುಕೊಳ್ಳುವ ಸಲುವಾಗಿ ಆರೋಪಿತರ ವಿರುದ್ದ ನಾನು ಹಾಗೂ ಚಾಸಾ-**1** ಸೇರಿ ಸುಳ್ಳು ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**